ದಿಃ07.08.2025ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ನಿ.ಪಿ.30 ನಾನೇ ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಅದರಲ್ಲಿರುವಂತಹ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.30(ಬಿ) ಎಂದು ಗುರುತಿಸಲಾಯಿತು. ನಿ.ಪಿ.17ಕ್ಕೆ ಸಂಬಂಧಿಸಿದಂತಹ ಅಸಲು ದಾಖಲಾತಿಯನ್ನು ನಾನು ಇಂದು ನ್ಯಾಯಾಲಯಕ್ಕೆ ತಂದಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೇನೆ.

ಪಾಟೀ ಸವಾಲುಃ 3, 5, 8 ಮತ್ತು 9ನೇ ಆರೋಪಿಗಳ ಪರವಾಗಿ ಶ್ರೀ. ಕೆ.ಟಿ.ವಿ., ವಕೀಲರಿಂದಃ

ಈಗ ನ್ಯಾಯಾಲಯಕ್ಕೆ ಹಾಜರುಪಡಿಸುವಂತಹ ಅಸಲು ದಾಖಲಾತಿಯನ್ನು ಈ ಹಿಂದೆ ತನಿಖಾಧಿಕಾರಿಗಳಿಗೆ ನೀಡಲು ನಿಮಗೆ ಯಾವುದೇ ಅಭ್ಯಂತರವಿರಲಿಲ್ಲ ಎಂದರೆ ಸಾಕ್ಷಿ, ನಾವು ಆಸ್ಪತ್ರೆಯ ಅಸಲು ದಾಖಲಾತಿಯನ್ನು ನೀಡುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಯಾವುದೇ ಕೃತ್ಯ ಅಥವಾ ಘಟನೆಗೆ ಸಂಬಂಧಿಸಿದಂತೆ ವ್ಯಕ್ತಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಾಗ ಆತ ಅಥವಾ ಆಕಗೆ ಸಂಬಂಧಿಸಿದಂತಹ ಎಂಎಲ್‌ಸಿಯ ಆಸ್ಪತ್ರೆಯ ಕಡತವನ್ನು ಬೇರೆ ಪ್ರಕರಣಗಳಲ್ಲಿ ನಾವು ತನಿಖಾಧಿಕಾರಿಗಳಿಗೆ ನೀಡುವುದಿಲ್ಲ ಎಂದರೆ ಸರಿ. ಸಾಕ್ಷಿ ಸ್ವಯಂ ಹೇಳುತ್ತಾರೆ, ನ್ಯಾಯಾಲಯದಿಂದ ಆದೇಶವಿದ್ದಲ್ಲ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇವೆ. ಎಂಎಲ್‌ಸಿಗೆ ಸಂಬಂಧಪಟ್ಟಂತಹ ಎಲ್ಲಾ

ಪ್ರಕರಣಗಳಲ್ಲಿ ನೀವು ಇದೇ ರೀತಿ ಅಸಲು ದಾಖಲಾತಿಯನ್ನು ಆಸ್ಪತ್ರೆಯಲ್ಲಿ ಇರಿಸಿಕೊಳ್ಳುವಂತೆ ಏನಾದರೂ ನಿಯಮಾನುಸಾರಗಳು ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿ, ಕೇಸ್ ಶೀಟ್‌ನ ಅಸಲು ದಾಖಲಾತಿಯನ್ನು ಮಾತ್ರ ನಾವು ಆಸ್ಪತ್ರೆಯಲ್ಲಿ ಇರಿಸಿಕೊಳ್ಳುತ್ತಿದ್ದು ಗಾಯದ ಪ್ರಮಾಣ ಪತ್ರ ಮತ್ತು ಡಿಸ್ಚಾರ್ಜ್ ಸಮ್ಮರಿಯನ್ನು ಚಿಕಿತ್ಸೆ ಪಡೆದ ವ್ಯಕ್ತಿಗೆ ಅಥವಾ ಆತನ ಪೋಷಕರಿಗೆ ನೀಡುತ್ತೇವೆ. ತನಿಖಾಧಿಕಾರಿಗೆ ಸಹಾಯ ಮಾಡುವ ಉದ್ದೇಶದಿಂದ ಮತ್ತು ನಂತರದಲ್ಲಿ ದಾಖಲಾತಿಗಳನ್ನು ಸೃಷ್ಟನೆ ಮಾಡುವ ಉದ್ದೇಶದಿಂದ ಅಸಲು ದಾಖಲಾತಿಯನ್ನು ನಮ್ಮ ಬಳಿಯೇ ಇರಿಸಿಕೊಳ್ಳುತ್ತೇವೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 10ನೇ ಆರೋಪಿಯ ಪರವಾಗಿ ಶ್ರೀ. ಡಿ.ಎಸ್.ಎಂ., ವಕೀಲರಿಂದಃ

ನಿ.ಪಿ.17ರಲ್ಲಿ ಕಾಣಿಸಿರುವಂತಹ ವ್ಯಕ್ತಿ ನಮ್ಮಲ್ಲಿಗೆ ಚಿಕಿತ್ಸೆಗಾಗಿ ಬರುವುದಕ್ಕಿಂತ ಪೂರ್ವದಲ್ಲಿ ತನಗೆ ಶಸ್ತ್ರಚಿಕಿತ್ಸೆ ಆಗಿದೆ ಎಂದು ಹೇಳಿಕೊಂಡಿದ್ದ ಎಂದರೆ ಸರಿ. ಗಾಯಾಳು ಗಂಗದಾಸಪ್ಪ ತನಗೆ ಶಸ್ತ್ರಚಿಕಿತ್ಸೆ ಎಲ್ಲಿ ಮತ್ತು ಯಾರು ಮಾಡಿರುತ್ತಾರೆ ಎಂಬುವುದು ಗೊತ್ತಿಲ್ಲ ಎಂದು ಹೇಳಿರುತ್ತಾನೆ. ನಿಮ್ಮ ಪ್ರಕಾರ ಒರಿಜಿನಲ್ ಮೆಡಿಕಲ್ ರೆಕಾರ್ಡ್ ಎಂದರೆ ಡಿಸ್ಚಾರ್ಜ್ ಸಮ್ಮರಿ ಮಾತ್ರನಾ ಅಥವಾ ಚಿಕಿತ್ಸೆಗೆ ಸಂಬಂಧಿಸಿದಂತಹ ಇತರ ದಾಖಲಾತಿಗಳೂ ಸಹ ಸೇರಿರುತ್ತದೆಯಾ ಎಂಬ ಪ್ರಶ್ನೆಗೆ ಸಾಕ್ಷಿ, ಮೆಡಿಕಲ್ ರೆಕಾರ್ಡ್ ಎಂದರೆ ಡಿಸ್ಚಾರ್ಜ್ ಸಮ್ಮರಿ ಜೊತೆಗೆ ಬೇರೆ ದಾಖಲಾತಿಗಳೂ

ಸಹ ಇರುತ್ತವೆ ಎಂದು ಹೇಳುತ್ತಾರೆ. ನಿ.ಪಿ.17ರಲ್ಲಿ ಡಿಸ್ಚಾರ್ಜ್ ಸಮ್ಮರಿ ಸಹ ಇದೆ ಎಂದರೆ ಸಾಕ್ಷಿ, ಅದು ಡಿಸ್ಚಾರ್ಜ್ ಸಮ್ಮರಿಯ ಕಾರ್ಬನ್ ಪ್ರತಿಯ ಜೆರಾಕ್ಸ್ ಎಂದು ಉತ್ತರಿಸಿರುತ್ತಾರೆ. ಡಿಸ್ಚಾರ್ಜ್ ಸಮ್ಮರಿಯ ಅಸಲು ದಾಖಲಾತಿಯನ್ನು ನಾನು ಇಂದು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿಲ್ಲ. ಇಂದು ನೀವು ಗಂಗದಾಸಪ್ಪನ ಚಿಕಿತ್ಸೆಗೆ ಸಂಬಂಧಿಸಿದ ಅಸಲು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೀರಿ ಎಂದು ಹೇಳಿದ್ದು, ನಿ.ಪಿ.17ರ ಅಸಲನ್ನು ಗಂಗದಾಸಪ್ಪನಿಂದ ಯಾವತ್ತು ಪಡೆದಿರಿ ಎಂದರೆ ಸಾಕ್ಷಿ ನಾನು ಅದನ್ನು ಗಂಗದಾಸಪ್ಪನಿಂದ ಪಡೆದಿಲ್ಲ, ಆಸ್ಪತ್ರೆಯಲ್ಲಿ ಇದ್ದದ್ದನ್ನು ಹಾಜರುಪಡಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನಿ.ಪಿ.17ರ ಅಸಲು ದಾಖಲಾತಿಯನ್ನು ತನಿಖಾ ಸಮಯದಲ್ಲಿ ತನಿಖಾಧಿಕಾರಿಗಳಿಗೆ ಕೊಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಹೇಳುತ್ತಾರೆ ಅಸಲು ದಾಖಲಾತಿಯನ್ನು ನಾವು ತನಿಖಾಧಿಕಾರಿಗಳಿಗೆ ಕೊಡುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಯಾವ ಯಾವ ಅಸಲು ದಾಖಲಾತಿಗಳು ನನ್ನ ಬಳಿ ಇದೆ ಮತ್ತು ಯಾವ ಯಾವ ಅಸಲು ದಾಖಲಾತಿಗಳನ್ನು ಗಂಗದಾಸಪ್ಪನಿಗೆ ನೀಡಲಾಗಿದೆ ಎಂದು ನಾನು ನಿಖರವಾಗಿ ಹೇಳಿಕೊಂಡಿಲ್ಲ. ತನಿಖಾಧಿಕಾರಿಗಳು ತನಿಖಾ ಸಮಯದಲ್ಲಿ ನನ್ನ ಹೇಳಿಕೆಯನ್ನು ಪಡೆದಿರುವುದಿಲ್ಲ. ಗಂಗದಾಸಪ್ಪನಿಗೆ ನಾನು ಚಿಕಿತ್ಸೆ ನೀಡಿರುವುದಿಲ್ಲ. ಆತನಿಗೆ ಏನೇನು ಚಿಕಿತ್ಸೆ ನೀಡಲಾಗಿದೆ ಎಂದು ನನಗೆ ವೈಯ್ಯಕ್ತಿಕ ಮಾಹಿತಿ ಇಲ್ಲ, ದಾಖಲಾತಿಗಳ ಅನುಸಾರವಾಗಿ ಮಾತ್ರ ಹೇಳು ಸಾಧ್ಯ. ತನಿಖಾಧಿಕಾರಿಗೆ ಸಹಾಯ ಮಾಡಲು ಸ್ಪಷ್ಟನೆಯ

ದಾಖಲಾತಿಯ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 11ನೇ ಆರೋಪಿಯ ಪರವಾಗಿ ಶ್ರೀ. ಕೆ.ಸಿ.ಎಂ., ವಕೀಲರಿಂದಃ

ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳಲು ಕೋರಿದ್ದು, ಅಳವಡಿಸಿಕೊಂಡಿರುತ್ತದೆ.

ಪಾಟೀ ಸವಾಲುಃ 1 ಮತ್ತು 4 ಹಾಗೂ 2, 6 ಮತ್ತು 7ನೇ ಆರೋಪಿಗಳ ವಕೀಲರಾದ ಶ್ರೀ. ಕೆ.ಜೆ.ಜಿ., ಮತ್ತು ಶ್ರೀ. ಎಂ.ಎನ್.ಪಿ., ವಕೀಲರನ್ನು ಕೂಗಿಸಲಾಯಿತು. ನ್ಯಾಯಾಲಯದಲ್ಲಿ ಗೈರು ಹಾಜರಿರುತ್ತಾರೆ. ಸದರಿ ಆರೋಪಿಗಳು ತಮ್ಮ ವಕೀಲರು ಇಂದು ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದು ನುಡಿದಿರುತ್ತಾರೆ. ಈ ಪ್ರಕರಣವು 10 ವರ್ಷ ಹಳೆಯ ಪ್ರಕರಣವಾಗಿದ್ದು, ಸಾಕ್ಷಿಗಳಿಗೆ ಸಮನ್ಸ್ ನ್ನು ಆರೋಪಿಗಳ ಸಮಕ್ಷಮದಲ್ಲೇ ನೀಡಿದ್ದರೂ ಸಹ ವಕೀಲರುಗಳು ಗೈರು ಹಾಜರಿರುವ ಕಾರಣ ಅವರ ಪರವಾಗಿ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.